**‘ಪ್ರೀ–ಡೆತ್ ಫೋಟೊಶೂಟ್‘ – ಹೀಗೊಂದು ಹೆಸರಿನಲ್ಲಿ, ಹುಡುಗಿಯೊಬ್ಬಳು ಮೂಗಿನ ಹೊಳ್ಳೆಯಲ್ಲಿ ಹತ್ತಿಯನ್ನು ಹಾಕಿಕೊಂಡು ಕೂತ ಫೋಟೊ ಇತ್ತೀಚೆಗೆ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಯಿತು. ಅದನ್ನು ‘ಇದೊಂಥರ ವಿಚಿತ್ರವಾಗಿದೆ’ ಎಂದು ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಟ್ಟಷ್ಟೇ ಮಂದಿ, ‘ಇದು ಶುದ್ಧ ಅತಿರೇಕ–ಅವಿವೇಕ’ ಎಂದು ಮೂಗು ಮುರಿದವರೂ ಇದ್ದರು. ಆ ಫೋಟೊದ ಮೂಲ ಹುಡುಕಿ ಹೊರಟಾಗ ಸಿಕ್ಕಿದ್ದು ಕೇರಳದ ಫವಾಸ್ ರೇಹಾನ್. ದೇವರನಾಡು ಕೇರಳ ಮೂಲದ ಫವಾಸ್, ಫೋಟೊಗ್ರಫಿಯನ್ನೇ ದೇವರು ಎಂದು ನಂಬಿರುವವರು. ಅವರ ಪ್ರಕಾರ ಇದು ಪ್ರೀ–ಡೆತ್ ಫೋಟೊಶೂಟ್ ಅಲ್ಲವೇ ಅಲ್ಲ; ಇದರ ಹಿಂದಿನ ಧ್ವನಿ ಬೇರೆಯೇ ಇದೆ. ಅಷ್ಟೇ ಅಲ್ಲ, ಹೀಗೆ ವಿಶಿಷ್ಟವೂ ತುಸು ವಿಕ್ಷಿಪ್ತವೂ ಅನಿಸಬಹುದಾದ ಧ್ವನಿಯನ್ನು ಹೊರಡಿಸುವ ಹಲವು ಫೋಟೊಶೂಟ್‌ಗಳನ್ನು ಅವರು ಮಾಡಿದ್ದಾರೆ. ಮೇಲ್ನೋಟಕ್ಕೆ ತುಸು ಒರಟು ಅಭಿವ್ಯಕ್ತಿಗಳಾಗಿ ತೋರುವ ಆ ಚಿತ್ರಗಳ ಹಿಂದಿದರುವುದು ಅಪ್ಪಟ ಕಲಾಭಿವ್ಯಕ್ತಿಯ ಸಂವೇದನಾಶೀಲ ಮನಸ್ಸು. ಫವಾಸ್ ರೇಹಾನ್ ಎಂಬ ಛಾಯಾಲೋಕದ ವಿಶಿಷ್ಟ ಧ್ವನಿಯ ಕ್ಲಿಕ್ ಕಹಾನಿ ಇಲ್ಲಿದೆ.**

**■ ಸಂದರ್ಶನ: ರೂಪಾ ಕೆ.ಎಂ.**

**◆ ನೀವು ಮಾಡಿದ ಪ್ರೀ–ಡೆತ್ ಶೂಟ್ ಬಗ್ಗೆ ಹೇಳಿ?**

ಇದನ್ನು ಪ್ರೀ–ಡೆತ್ ಶೂಟ್ ಅಂತ ಕರೆದಿರೋದು ಸಾಮಾಜಿಕ ಜಾಲತಾಣದ ಬಳಕೆದಾರರೇ ಹೊರತು ನಾನಲ್ಲ. ನಾನಿದನ್ನು ಆ ಪರಿಕಲ್ಪನೆಯಲ್ಲಿ ಶೂಟ್ ಮಾಡಲಿಲ್ಲ. ಪ್ರಸ್ತುತ ಹೆಣ್ಣು ಕುಲವೇ ಸುರಕ್ಷಿತವಾಗಿಲ್ಲ. ಯಾವುದೇ ಕ್ಷಣದಲ್ಲಾದರೂ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ ಆಗಬಹುದು. ಅವರು ಕೊಲೆಗೀಡಾಗಬಹುದು. ಈ ಸಂದೇಶವನ್ನು ರವಾನಿಸಲು ಈ ಶೂಟ್ ಮಾಡಲಾಯಿತು. ಜೀವನದುದ್ದಕ್ಕೂ ಹೆಣ್ಣು ತನ್ನ ನೈಜ ಭಾವನೆಗಳನ್ನು ತೋರ್ಪಡಿಸಲು ಅವಕಾಶವೇ ಇಲ್ಲ. ಅಭಿವ್ಯಕ್ತಿಯ ವಿಚಾರದಲ್ಲಿ ಆಕೆಯನ್ನು ನಿರ್ಜೀವ ಎಂದೇ ಭಾವಿಸಲಾಗುತ್ತದೆ ಎಂಬ ಅಮೂರ್ತ ಸಂದೇಶ ನನ್ನ ಫೋಟೊಶೂಟ್ ಹಿಂದಿದೆ.

**◆ ನಿಮ್ಮ ಬಗ್ಗೆ ಹೇಳಿ?**

ನಾನೊಬ್ಬ ಸೀದಾ ಸಾದಾ ಮಲಯಾಳಿ ಹುಡುಗ. ಡಿಗ್ರಿ ಮುಗಿದ ಮೇಲೆ ಒಳಾಂಗಣ ವಿನ್ಯಾಸದಲ್ಲಿ ಡಿಪ್ಲೊಮಾ ಪಡೆದಿರುವೆ. ಮುಂಬೈನಲ್ಲಿರುವ ರಾಷ್ಟ್ರೀಯ ಛಾಯಾಚಿತ್ರಣ ಸಂಸ್ಥೆ ( ಎನ್‌ಐಪಿ)ಯಲ್ಲಿ ಕೋರ್ಸ್ ಮಾಡಿದ್ದೇನೆ. ಅನ್ಯರಿಗೆ ವಿಕ್ಷಿಪ್ತ ಎನಿಸುವ ಈ ಶೂಟ್‌ಗಳೆಲ್ಲವೂ ಏನಾದರೂ ಹೇಳಬೇಕೆಂಬ ತುಡಿತದಿಂದಲೇ ಹುಟ್ಟಿದವು. ಕಾಡಿದ್ದನ್ನು ಫೋಟೊಗ್ರಫಿಯ ಕಲೆಯ ಮೂಲಕ ಮಾತ್ರ ಹೇಳಲು ನನಗೆ ಸಾಧ್ಯ. ಸದ್ಯಕ್ಕೆ ತಮಿಳು ಸಿನಿಮಾವೊಂದಕ್ಕೆ ಫೋಟೊಗ್ರಾಫರ್ ಆಗಿ ಕೆಲಸ ಮಾಡುತ್ತಿದ್ದೇನೆ.

**◆ ಕ್ಯಾಮೆರಾ ಹಿಡಿಯಲು ಸ್ಫೂರ್ತಿ?**

ಒಂದೆರಡು ವರ್ಷಗಳ ಹಿಂದೆ ನಿಕ್ ಅಟ್ ಅವರ ‘ಟೆರರ್ ಆಫ್ ವಾರ್’ ಫೋಟೊಗ್ರಫಿ ಕಲೆಕ್ಷನ್ ನೋಡಿದ ಮೇಲೆ ಕ್ಯಾಮೆರಾವನ್ನು ಪ್ರೀತಿಸಲು ಶುರು ಮಾಡಿದೆ. ಆ ಕಾರಣಕ್ಕಾಗಿ ಕೆಲಸ ಬಿಟ್ಟೆ. ಮಾಡೆಲಿಂಗ್ ಶೂಟ್ ಜತೆ ಅಮೂರ್ತ ಕಲ್ಪನೆಗಳ ಮೂಲಕ ನನಗನಿಸಿದ್ದನ್ನು ಹೇಳಲು ಪ್ರಯತ್ನಿಸುತ್ತಿದ್ದೇನೆ.

**◆ ನಿಮ್ಮ ಪ್ರಕಾರ ಫೋಟೊಗ್ರಫಿ ಅಂದರೆ, ದೃಶ್ಯಗಳನ್ನು ಸೃಜನಾತ್ಮಕವಾಗಿ ದಾಖಲಿಸುವುದಾ?**

ಫೋಟೊಗ್ರಫಿಯೆಂಬುದು ಕಲೆಯ ಒಂದು ನಿರ್ದಿಷ್ಟ ಚೌಕಟ್ಟಿಗೆ ಒಳಪಡುವುದಿಲ್ಲ. ಭಾವನೆ, ಸಂದೇಶವನ್ನು ರವಾನಿಸಲು ಒಂದೊಮ್ಮೆ ಪದಗಳು ಸೋಲಬಹುದು. ಆ ಕೊರತೆಯನ್ನು ಒಂದೊಳ್ಳೆಯ ಫೋಟೋ ನೀಗಿಸಬಲ್ಲದು. ನೈಜ ಘಟನೆಗಳನ್ನು ದಾಖಲಿಸುವುದು ಎಲ್ಲ ಸಂದರ್ಭಗಳಲ್ಲಿಯೂ ಸಾಧ್ಯವಾಗದು. ಹಾಗಾಗಿ ಅವುಗಳನ್ನು ಸೃಜನಶೀಲತೆಯಿಂದ ಮರು ರೂಪಿಸುವುದರಲ್ಲಿ ನನಗೆ ಆಸಕ್ತಿ.

**◆ ನಿಮ್ಮ ಛಾಯಾಚಿತ್ರಗಳನ್ನು ಜನ ಹೇಗೆ ಸ್ವೀಕರಿಸಿದ್ದಾರೆ?**

ಟೀಕೆಗಳೇ ಹೆಚ್ಚು ಕೇಳಿ ಬಂದಿರೋದು. ಹಲವು ಶೂಟ್‌ಗಳು ವಿವಾದಕ್ಕೆ ಈಡಾಗಿವೆ. ಜಾತಿ, ಧರ್ಮ ಮತ್ತು ಹಿಂಸೆಗಳಿಂದ ಈ ಜಗತ್ತು ಧ್ರುವೀಕರಣಗೊಂಡಿದೆ. ಈ ಮುಂಚೆ ಧಾರ್ಮಿಕ ಅಸಹಿಷ್ಣುತೆಯ ಬಗ್ಗೆ ಮಾಡಿದ್ದ ಶೂಟ್ ವಿವಾದಕ್ಕೊಳಗಾಗಿತ್ತು. ಕೇರಳದ ಟಿ.ವಿ. ರಿಯಾಲಿಟಿ

